ಮೈಸೂರು ವಿಶ್ವವಿದ್ಯಾನಿಲಯ

# ಕೇಂದ್ರದ ಕಾರ್ಯಸಾಧನೆಗಳ ಒಂದು ಕಿರುನೋಟ




## ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು–570006

**ಹಿನ್ನೆಲೆ:**

ಬಾಬೂ ಜಗಜೀವನರಾಮ್ ಇಪ್ಪತ್ತನೇ ಶತಮಾನದ ಅತ್ಯಂತ ಪ್ರಸಿದ್ಧ ಭಾರತೀಯ ಜನನಾಯಕ. ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅವರು ರಾಷ್ಟ್ರಕ್ಕೆ ನೀಡಿರುವ ಮಹಾನ್ ಕೊಡುಗೆಗಳಿಂದಾಗಿ ಅವರ ಹೆಸರು ಸುವರ್ಣಾಕ್ಷರಗಳಲ್ಲಿ ನಮ್ಮ ದೇಶದ ಇತಿಹಾಸದಲ್ಲಿ ಬರೆಯಲಾಗಿದೆ. ನಮ್ಮ ದೇಶದ ಇತಿಹಾಸದಲ್ಲಿ ಬರೆಯಲಾಗಿದೆ. ನಮ್ಮ ರಾಷ್ಟ್ರದ ಉನ್ನತಿ ಹಾಗೂ ಸರ್ವಾಂಗಣೀಯ ಪ್ರಗತಿಗೆ ಅವರ ಕೊಡುಗೆ ಅನನ್ಯ.

ಭಾರತದ ಸಮಾಜ ಹಾಗೂ ರಾಜಕಾರಣದ ಮೇಲೆ ಅವರ ಪ್ರಭಾವವನ್ನು ಪರಿಗಣಿಸಿ, ಬಾಬೂ ಜಗಜೀವನರಾಮ್ ಅವರ ಅಧ್ಯಯನ ಪೀಠವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗಸ್ಟ್ ಮಾಹೆ 18, 2003ರಲ್ಲಿ ಸ್ಥಾಪಿಸಲಾಯಿತು. ಪ್ರಾರಂಭದ ಕೆಲವು ವರ್ಷಗಳು ಈ ಅಧ್ಯಯನ ಪೀಠ, ಮಾನಸಗಂಗೋತ್ರಿಯ ಇತಿಹಾಸ ಅಧ್ಯಯನ ವಿಭಾಗದಲ್ಲಿ ನೆಲೆಗೊಂಡಿತ್ತು. ಆವರ್ತನವನ್ನು ನೀತಿಯನುಸಾರ, ಮೂಲದ ಈ ಅಧ್ಯಯನ ಪೀಠವನ್ನು ರಾಜ್ಯಶಾಸ್ತ್ರ ಅಧ್ಯಯನ ಪೀಠಕ್ಕೆ ನೀಡಲಾಯಿತು.

ಈ ಅಧ್ಯಯನ ಪೀಠದ ಕಾರ್ಯಚಟುವಟಿಕೆಯನ್ನು ವಿಸ್ತರಿಸಲು, ಸ್ವಂತ ಕಟ್ಟಡದ ಅವಶ್ಯಕತೆ ಕಂಡು ಬಂದ್ದುದರಿಂದ, ಮಾನಸಗಂಗೋತ್ರಿಯಲ್ಲಿ ಅದನ್ನು ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಯಿತು ಶ್ರೀಯುತರಾದ ಸಿ.ಎಚ್. ವಿಜಯಶಂಕರ್ ಅವರು ಮೈಸೂರು ಲೋಕಸಭಾ ಸದಸ್ಯರಾಗಿದ್ದ ಸಂದರ್ಭದಲ್ಲಿ ಅವರು ಲೋಕಸಭಾ ಸದಸ್ಯರ ನಿಧಿಯಿಂದ ನೀಡಿದ ಹಣ ಸಹಾಯದಿಂದ ನವಕಟ್ಟದ ನಿರ್ಮಾಣವನ್ನು ಪೂರ್ಣಗೊಳಿಸಲಾಯಿತು. ಅಧ್ಯಯನ ಪೀಠವೊಂದು ಪ್ರಥಮ ಬಾರಿಗೆ ಸ್ವತಂತ್ರ ಕಟ್ಟದಹೊಂದುವಂತಾಯಿತು. ಈ ನಿರ್ಮಾಣ ಇಡೀ ರಾಷ್ಟ್ರಕ್ಕೆ ಒಂದು ಮಾದರಿಯಾಯಿತು.

ಬಾಬೂ ಜಗಜೀವನರಾಮ್ ಅಧ್ಯಯನ ಪೀಠದ ಕಾರ್ಯಚಟುವಟಿಕೆಗಳು ವಿಸ್ತರಗೊಂಡ ಹಾಗೇ ಒಂದು ಅಧ್ಯಯನ ಕೇಂದ್ರದ ಸ್ಥಾಪನೆ ಅನಿವಾರ್ಯವಾಯಿತು. ಅದ್ವಿತಿಯ ದೇಶಪ್ರೇಮಿ ಬಾಬೂಜಿಯವರ ಬಗ್ಗೆ ಜನಸಾಮಾನ್ಯರಲ್ಲಿ. ಅದರಲ್ಲೂ ವಿಶೇಷವಾಗಿ ಯುವ ಜನತೆ, ವಿದ್ಯಾರ್ಥಿ ಸಮೂಹ ಮತ್ತು ದಲಿತರಲ್ಲಿ ಅರಿವು ಮೂಡಿಸಲು, ವಿಶ್ವವಿದ್ಯಾನಿಲಯ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಯಿತು. ವಿಶ್ವವಿದ್ಯಾನಿಲಯ ಹಾಗೂ ಬಾಬೂ ಜಗಜೀವನರಾಮ್ ಅವರ ಅಭಿಮಾನಿ ಬಳಗದ ಬೇಡಿಕೆಯನ್ನು ಗಮನಿಸಿದ ಕರ್ನಾಟಕ ಸರ್ಕಾರ, ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಧನಸಹಾಯವನ್ನು ನೀಡಿತು. ಇದರೊಂದಿಗೆ ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿಯಲ್ಲಿ ರಚನೆಗೊಂಡಿತು. ದೇಶದ ಪ್ರಸಿದ್ಧ ಹಾಗೂ ಶತಮಾನದಷ್ಟು ಹಳೆಯದಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಈ ಅಧ್ಯಯನ ಕೇಂದ್ರ, ಒಂದುಗರಿ ಮುಡಿಗೇರಿಸಿದಂತಾಯಿತು. ಇದರೊಂದಿಗೆ ಬಾಬೂ ಜಗಜೀವನರಾಮ್ ಅವರ ಜೀವನದ ವಿವಿಧ ಆಯಾಮಗಳನ್ನು ಕುರಿತಂತೆ ಅಧ್ಯಯನ ಹಾಗೂ ಸಂಶೋಧನೆ ನಡೆಸಲು ಅನುವು ಮಾಡಿಕೊಟ್ಟಂತಾಯಿತು. ಬಾಬೂಜಿರವರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಚಿಂತನೆಗಳನ್ನು ಕುರಿತಂತೆ ಈಗಾಗಲೇ ಅಧ್ಯಯನ ಕೇಂದ್ರ ಆನೇಕ ಪ್ರಕಟಣೆಗಳನ್ನು ಹೊರತಂದಿದೆಯಲ್ಲದೆ, ಸಂಕಿರಣ, ಚರ್ಚೆ ಹಾಗೂ ವಿಸ್ತರಣಾ ಚಟುವಟಿಕೆಗಳಲ್ಲಿ ಕ್ರಿಯಶೀಲವಾಗಿದೆ.

ಈ ಅಧ್ಯಯನ ಕೇಂದ್ರ ಅಸ್ತಿತ್ವಕ್ಕೆ ಬಂದಿದ್ದು 2010ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಈ ಅಧ್ಯಯನ ಕೇಂದ್ರದ ಚಟುವಟಿಕೆಗಳನ್ನು ಮುಂದುವರೆಸಲು ಉದಾರವಾದ ಧನಸಹಾಯವನ್ನು ನೀಡಿದೆ. ಈ ಸಂದರ್ಭದಲ್ಲಿ ಈ ಅಧ್ಯಯನ ಕೇಂದ್ರವನ್ನು ಇನ್‌ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್ ಸ್ಕೀಮ್‌ನಲ್ಲಿ ಕೇಂದ್ರಕ್ಕೆ ನೂತನ ಕಟ್ಟಡಕಟ್ಟಲು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಸೇರಿಸಿದೆ. ಈ ಯೋಜಿತ ಕಟ್ಟಡ ಶಂಕುಸ್ಥಾಪನೆಯನ್ನು ಲೋಕಸಭೆಯ ಸಭಾಪತಿಗಳಾದ ಶ್ರೀಮತಿ ಡಾ. ಮೀರಾಕುಮಾರ್ ಅವರು ನೆರವೇರಿಸಿದರು. ಪೂರ್ಣಗೊಂಡ ನೂತನ ಕಟ್ಟಡದ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಸಚಿವರಾದ ಶ್ರೀ ನಾರಾಯಣಸ್ವಾಮಿಯವರು ಮಾಡಿದರು. ಇದೇ ಸಂದರ್ಭದಲ್ಲಿ ವಸ್ತು ಸಂಗ್ರಹಾಲಯವನ್ನು ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್ ಅವರು ಉದ್ಘಾಟಿಸಿದರು. ನೂತನ ಕಟ್ಟಡದಲ್ಲಿ ವಸ್ತು ಸಂಗ್ರಹಾಲಯ, ತರಗತಿಗಳು, ಗ್ರಂಥಾಲಯ ಹಾಗೂ ವಿಶಾಲವಾದ ಸಭಾಂಗಣ ಕೊಠಡಿಯನ್ನು ಒಳಗೊಂಡಿದೆ.

ಪ್ರೊ. ಟಿ.ಯಲ್ಲಪ್ಪ ಬೂತಯ್ಯನವರನ್ನು 2003ರಲ್ಲಿ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಬಾಬೂ ಜಗಜೀವನರಾಮ್ ಪೀಠಕ್ಕೆ ನೇಮಿಸಲಾಯಿತು. ಮುಂದೆ 2008ರಲ್ಲಿ ಡಾ. ಕೆ. ಸದಾಶಿವ ಅವರನ್ನು ವಿಶ್ವವಿದ್ಯಾನಿಲಯ ಸಂಶೋಧನ ಅಧಿಕಾರಿಯನ್ನಾಗಿ ಬಾಬೂ ಜಗಜೀವನರಾಮ್ ಪೀಠಕ್ಕೆ ನೇಮಿಸಿತು. 2009ರಲ್ಲಿ ಕಛೇರಿಯ ನಿರ್ವಹಣೆಗಾಗಿ ಶ್ರೀ ಎನ್.ಆರ್. ಮಧುಸೂದನ್ ಅವರನ್ನು ಬೆರಳಚ್ಚುಗಾರ ಹಾಗೂ ಗುಮಾಸ್ತರಾಗಿ ನೇಮಕ ಮಾಡಲಾಯಿತು. 2008ರಲ್ಲಿ ಕಛೇರಿ ಸಹಾಯಕರನ್ನಾಗಿ ಶ್ರೀ ಬಿ.ರಮೇಶ ಅವರನ್ನು ನೇಮಿಸಲಾಯಿತು.

ಮೇ 2010ರಲ್ಲಿ ಡಾ. ಮೈಲಹಳ್ಳಿ ರೇವಣ್ಣ ಅವರನ್ನು ಬಾಬೂ ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲಾಯಿತು. ಇದೇ ಸಂದರ್ಭದಲ್ಲಿ ಡಾ. ಎಂ. ಶ್ರೀನಿವಾಸಮೂರ್ತಿ ಅವರನ್ನು ಸಂಶೋಧನ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಆಗಸ್ಟ್ 2010ರಲ್ಲಿ ಪ್ರೊ. ಮೈಲಹಳ್ಳಿ ರೇವಣ್ಣ ಅವರನ್ನು ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದ ಪ್ರಾಧ್ಯಾಪಕ ಹಾಗೂ ನಿರ್ದೇಶಕರನ್ನಾಗಿ ಮುಂದುವರೆಸಲು ವಿಶ್ವವಿದ್ಯಾನಿಲಯ ಆದೇಶಿಸಿತು. ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಲಕ್ಷ್ಮೀನಾರಾಯಣ ಅರೋರಾ ಅವರನ್ನು ಬಾಬೂ ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲಾಯಿತು. 2013ರಲ್ಲಿ ಪ್ರೊ. ತಿಪ್ಪೇಸ್ವಾಮಿಯವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲಾಯಿತು. ಅವರ ನಂತರ 2016ರಲ್ಲಿ ಶ್ರೀ ಜಿ.ಎಸ್.ಭಟ್ಟ ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲಾಯಿತು. ನಂತರ 2017ರಲ್ಲಿ ಪ್ರೊ. ಜಿ. ರಾಮರತನ್ ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕಗೊಂಡರು.

2010ರಲ್ಲಿ ಸಂಶೋಧನಾರ್ಥಿಯಾಗಿ ಶ್ರೀ ಕೆ.ಎಸ್. ಶಿವಕುಮಾರ್ ಮತ್ತು ಶ್ರೀಮತಿ ಜೆ.ಕೆ. ಸುಜಾತ ಅವರನ್ನು ನೇಮಕ ಮಾಡಲಾಯಿತು. 2011 ಶಿವಕುಮಾರ್ ಅವರು ರಾಜೀನಾಮೆ ನೀಡಿ ತೆರವಾದ ಸ್ಥಾನಕ್ಕೆ ಶ್ರೀ ಆನಂದಕುಮಾರ್ ಅವರು 2011ರ ಜುಲೈನಲ್ಲಿ ಸಂಶೋಧನಾರ್ಥಿಯಾಗಿ ನೇಮಕವಾದರು.

## ಕೇಂದ್ರದ ಉದ್ದೇಶಗಳು:

1. ಬಾಬೂ ಜಗಜೀವನರಾಮ್ ಅವರ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಚಿಂತನೆಗಳನ್ನು ಪ್ರಸ್ತುತ ಕಾಲಘಟ್ಟವನ್ನು ಆಧಾರಿಸಿ ಅಧ್ಯಯನ ಕೈಗೊಳ್ಳುವುದು.
2. ಬಾಬೂ ಜಗಜೀವನರಾಮ್ ಅವರ ಚಿಂತನೆ ಮತ್ತು ಕಾರ್ಯಸಾಧನೆಗಳ ಮೇಲೆ ಮಹಾತ್ಮಗಾಂಧಿ, ಬಾಬಾ ಸಾಹೇಬ್ ಅಂಬೇಡ್ಕರ್, ಸುಭಾಷ್‌ಚಂದ್ರಬೋಸ್ ಹಾಗೂ ಇತರ ಸಮಕಾಲೀನ ನಾಯಕರ ಚಿಂತನೆ ಮತ್ತು ಅಭಿಪ್ರಾಯಗಳ ಪ್ರಭಾವವನ್ನು ಗುರುತಿಸಿ ಅಧ್ಯಯನ ನಡೆಸುವುದು.
3. ಭಾರತೀಯ ಸಮಾಜದ ಪುನರ್ ನಿರ್ಮಾಣದ ಯೋಜನೆಯ ಹಿನ್ನೆಲೆಯಲ್ಲಿ ಬಾಬೂ ಜಗಜೀವನರಾಮ್ ಅವರ ಚಿಂತನೆ ಮತ್ತು ದೃಷ್ಟಿಕೋನ ಹಾಗೂ ಸಮಕಾಲೀನ ಜನನಾಯಕರ ಚಿಂತನೆ ಮತ್ತು ದೃಷ್ಟಿಕೋನದಲ್ಲಿರಬಹುದಾದ ಸಾಮ್ಯತೆ ಮತ್ತು ವೈರುದ್ಯತೆಗಳನ್ನು ಕುರಿತಂತೆ ಅಧ್ಯಯನವನ್ನು ಕೈಗೊಳ್ಳುವುದು.
4. ಬಾಬೂ ಜಗಜೀವನರಾಮ್ ಅವರ ಸಾಮಾಜಿಕ ಮತ್ತು ಆರ್ಥಿಕ ಗ್ರಹಿಕೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು.
5. ಬಾಬೂ ಜಗಜೀವನರಾಮ್ ಅವರ ಜೀವನಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನ ಮತ್ತು ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿ, ವಿಸ್ತರಿಸುವುದು.
6. ಬಾಬೂ ಜಗಜೀವನರಾಮ್ ಅವರ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಚಿಂತನೆಗಳನ್ನು ಸಮಕಾಲೀನ ಸಮಾಜಕ್ಕೆ ತಲುಪಿಸುವುದು ಹಾಗೂ ಅವುಗಳ ಪ್ರಸ್ತುತತೆಯ ಬಗ್ಗೆ ಅರಿವು ಮೂಡಿಸಲು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಉಪನ್ಯಾಸ, ವಿಚಾರ ಸಂಕಿರಣ, ಸಂವಾದ ಹಾಗೂ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು.
7. ಬಾಬೂ ಜಗಜೀವನರಾಮ್ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತಂತೆ ಯುವ ಜನರಲ್ಲಿ ಅರಿವು ಮೂಡಿಸುವ ಸಾಧನವನ್ನಾಗಿ ಕೇಂದ್ರದಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ವಿವಿಧ ಅಧ್ಯಯನ ಕೋರ್ಸುಗಳನ್ನು ರಚಿಸಿ, ನಿರ್ವಹಿಸುವುದು.
8. ಬಾಬೂ ಜಗಜೀವನರಾಮ್ ಅವರ ಜೀವನ ಅವರ ಚಿಂತನೆಗಳ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳುವುದು ಹಾಗೂ ಪ್ರೋತ್ಸಹ ನೀಡುವುದು.

## ಕೇಂದ್ರದ ಪ್ರಕಟಣೆಗಳು:

ಕೇಂದ್ರದ ಪ್ರಕಟಣಾ ವಿಭಾಗ ಕ್ರಿಯಾಶೀಲವಾಗಿದ್ದು ಆನೇಕ ಕೃತಿಗಳನ್ನು ಹೊರ ತಂದಿದೆ. ಹೊರತಂದಿರುವ ಕೃತಿಗಳಲ್ಲಿ ಭಾಷಾಂತರದ ಕೃತಿಗಳು ಸಹ ಸೇರಿವೆ. "Caste Challenge in India" ಎಂಬ ಬಾಬೂ ಜಗಜೀವನರಾಮ್ ಅವರ ಕೃತಿಯನ್ನು "ಭಾರತದಲ್ಲಿ ಜಾತಿ ಪದ್ಧತಿಯ ಸವಾಲುಗಳು" ಎಂದು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲಾಗಿದೆ. ವಿಸ್ತರಣಾ ಕಾರ್ಯಚಟುವಟಿಕೆಯ ಅಂಗವಾಗಿ ಪ್ರಮುಖ ಸಂಪನ್ಮೂಲ ವ್ಯಕ್ತಿಗಳು ನೀಡಿರುವ ಉಪನ್ಯಾಸಗಳನ್ನು ಪರಿಷ್ಕರಿಸಿ, ಸಂಪಾದಿಸಿ "ಬಾಬೂಜಿ ಚಿಂತನ–ಮಂಥನ" ಎಂಬ ಕೃತಿಯನ್ನು ಹೊರ ತರಲಾಗಿದೆ. ದಕ್ಷಿಣ ಭಾರತದಲ್ಲಿ ಆಗಿ ಹೋಗಿರುವ ಪ್ರಮುಖ ದಲಿತ

ಸಂತರ ಜೀವನ ಚರಿತ್ರೆಯನ್ನು ಕ್ರೂಢೀಕರಿಸಿ "ದಲಿತ ಸಂತರು" ಎಂಬ ಕನ್ನಡದ ಕೃತಿಯನ್ನು ಕನ್ನಡ ನಾಡಿನ ಜನತೆಗೆ ಅರ್ಪಿಸಲಾಗಿದೆ.

ಬಾಬೂ ಜಗಜೀವನರಾಮ್ ಅವರ ಬಾಳ ಸಂಗಾತಿ ಶ್ರೀಮತಿ ಇಂದ್ರಾಣಿದೇವಿ ಜಗಜೀವನರಾಮ್ ಅವರು ಹಿಂದಿಯಲ್ಲಿ ರಚಿಸಿರುವ "ದೇಖೀ ಸುನೀ ಬೀತೀ ಬಾತೇಂ" ಎಂಬ ಮೂರು ಸಂಪುಟಗಳ ಕೃತಿಯನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಈ ಮೂರು ಸಂಪುಟಗಳು "ನೆನಪು ಸಂಜೀವಿನಿ" ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಪ್ರಕಟಗೊಂಡಿದೆ. ಕನ್ನಡ ಪ್ರಾಧ್ಯಾಪಕರಾದ ಪ್ರೊ. ಲಕ್ಷ್ಮೀನಾರಾಯಣ ಅರೋರಾ, ಹಿಂದಿ ಪ್ರಾಧ್ಯಾಪಕರಾದ ಪ್ರೊ. ತಿಪ್ಪೇಸ್ವಾಮಿ ಮತ್ತು ಪ್ರೊ. ಹೆಚ್.ಎಂ. ಕುಮಾರಸ್ವಾಮಿಯವರು ಈ ಕಾರ್ಯವನ್ನು ನಿರ್ವಹಿಸಿದ್ದಾರೆ. ಹಾಗೆಯೇ ಪ್ರೊ. ತಿಪ್ಪೇಸ್ವಾಮಿಯವರು "ಬಾಬೂ ಜಗಜೀವನರಾಮ್ ಅವರ ಹೋರಾಟದ ಬದುಕು" ಎಂಬುದಾಗಿ ಬಾಷಾಂತರಿಸಿ ಕೇಂದ್ರದಿಂದ ಪ್ರಕಟಣೆಗೊಂಡಿದೆ. ಶ್ರೀ ಜಿ.ಎಸ್. ಭಟ್ಟ ಅವರು ರಚಿಸಿರುವ "ಧೀಮಂತ ರಾಷ್ಟ್ರನಾಯಕ ಡಾ. ಬಾಬೂ ಜಗಜೀವನರಾಮ್" ಎಂಬ ಕೃತಿಯನ್ನು ಕೇಂದ್ರದಿಂದ ಪ್ರಕಟಿಸಲಾಗಿದೆ. 2016–17ನೇ ಸಾಲಿನಲ್ಲಿ ಈ ಮೇಲ್ಕಂಡ ಐದು ಪ್ರಮುಖ ಕೃತಿಗಳನ್ನು 2016ರ ಮೇ 30ರಂದು ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು. ಈ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಶ್ರೀಮತಿ ಮೀರಾಕುಮಾರ್, ಮಾಜಿ ಲೋಕಸಭಾ ಅಧ್ಯಕ್ಷೆ ಹಾಗೂ ಬಾಬೂ ಜಗಜೀವನರಾಮ್ ಅವರ ಪುತ್ರಿ ಹಾಜರಿದ್ದರು. ಇದೇ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಎಚ್. ಆಂಜನೇಯ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಮತ್ತು ಕಂದಾಯ ಸಚಿವರಾದ ಸನ್ಮಾನ್ಯ ಶ್ರೀ ವಿ. ಶ್ರೀನಿವಾಸಪ್ರಸಾದ್‌ರವರು ಭಾಗವಹಿಸಿದ್ದರು. ವಿಶ್ವವಿದ್ಯಾನಿಲಯದ ಕುಲಪತಿಗಳಾದ ಶ್ರೀಯುತ ಕೆ.ಎಸ್. ರಂಗಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶ್ರೀಮತಿ ಇಂದ್ರಾಣಿದೇವಿಯವರ ಕೃತಿಯನ್ನು ಭಾಷಾಂತರ ಮಾಡಲು ಬೇಕಾದ ಧನಸಹಾಯವನ್ನು ನೀಡಿದೆ.

ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಎಚ್.ಆಂಜನೇಯ ಅವರು 2013–14ನೇ ಸಾಲಿನ ಬಜೆಟ್‌ನಲ್ಲಿ ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರಕ್ಕೆ ಐವತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ. ಈ ಅನುದಾನದ ಮೊತ್ತದಲ್ಲಿ ಸಂಶೋಧನಾ ಯೋಜನೆಯನ್ನು ರಚಿಸಿ ಏಳು ಜನರನ್ನು ಆರು ತಿಂಗಳ ಅವಧಿಗೆ ನೇಮಕ ಮಾಡಲಾಗಿತ್ತು. ಪ್ರಾರಂಭದಿಂದಲೂ ಕರ್ನಾಟಕ ಸರ್ಕಾರ ಈ ಕೇಂದ್ರಕ್ಕೆ ಆಗಾಗ್ಗೆ ಧನಸಹಾಯವನ್ನು ನೀಡಿ ಇಲ್ಲಿನ ಕಾರ್ಯಗಳಿಗೆ ಪ್ರೋತ್ಸಾಹಿಸಿದೆ.

## ವಿಚಾರ ಸಂಕಿರಣಗಳು ಮತ್ತು ವಿಸ್ತರಣಾ ಚಟುವಟಿಕೆಗಳು:

ಬಾಬೂ ಜಗಜೀವನರಾಮ್‌ರವರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳನ್ನು ರಾಜ್ಯದ ಉದ್ದಗಾಲಕ್ಕೂ ಪ್ರಸಂಸಿಸಲು ಕೇಂದ್ರ ಆನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗಿದೆ. ನಗರ ಮತ್ತು ಗ್ರಾಮಾಂತರ ಪ್ರದೇಶದ ಯುವ ಜನತೆಗೆ ವಿಶೇಷವಾಗಿ ವಿದ್ಯಾರ್ಥಿ ಸಮೂಹಕ್ಕೆ ಬಾಬೂಜಿಯವರ ಚಿಂತನೆಗಳನ್ನು ಕುರಿತಂತೆ ಅರಿವು ಮೂಡಿಸಲು ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಿ, ವಿಶೇಷ ಉಪನ್ಯಾಸ, ಚರ್ಚಾಕೂಟ ಹಾಗೂ ಸಂವಾದಗಳನ್ನು ಏರ್ಪಡಿಸಲಾಗುತ್ತಿದೆ. ಆನಸಾಮಾನ್ಯರಿಗೆ ಸರ್ಕಾರದ

ವಿವಿಧ ಕಾರ್ಯಕ್ರಮಗಳ ಪರಿಚಯವನ್ನು ಸಹ ಈ ಸಂದರ್ಭದಲ್ಲಿ ನೀಡಲಾಗುತ್ತಿದೆ. ಆರೋಗ್ಯ, ಸ್ಥಳೀಯ ನೈರ್ಮಲ್ಯ ಹಾಗೂ ಶಿಕ್ಷಣದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಗುತ್ತಿದೆ.

## ಕೇಂದ್ರದ ಮುಂದಿರುವ ಯೋಜನೆಗಳು:

ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯದ ಅತ್ಯಂತ ಪ್ರಮುಖವಾದ ಸಂಶೋಧನ ಕೇಂದ್ರ. ಈ ಕೇಂದ್ರ ಈಗಾಗಲೇ ನಿರ್ವಹಿಸುತ್ತಿರುವ ಸಂಶೋಧನೆ ಮತ್ತು ವಿಸ್ತರಣ ಕಾರ್ಯಚಟುವಟಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲು ಬದ್ಧವಾಗಿದೆ. ಇದುವರೆವಿಗೂ ಬಾಬೂಜಿಯವರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಚಿಂತನೆಗಳ ಬಗೆಗೆ ಅಧ್ಯಯನಕ್ಕೆ ಸೀಮಿತವಾಗಿರುವ ಕೇಂದ್ರದ ಕಾರ್ಯಚಟುವಟಿಕೆಗಳಲ್ಲಿ ನೂತನವಾಗಿ ಬಾಬೂಜಿಯವರು ಕೃಷಿ ಹಾಗೂ ಕೃಷಿ ಆಧಾರಿತ ವ್ಯವಸ್ಥೆ, ಆಹಾರ, ಧಾನ್ಯಗಳ ಉತ್ಪದನೆ, ದೇಶದ ರಕ್ಷಣೆಯ ನಿರ್ವಹಣೆ, ಕಾರ್ಮಿಕರ ಕಲ್ಯಾಣ, ಸೈನಿಕರ ಕಲ್ಯಾಣ, ಜಾತ್ಯತಿತ ವ್ಯವಸ್ಥೆ, ಮಹಿಳೆಯರ ಸಬಲೀಕರಣ ಇತ್ಯಾದಿಗಳ ಬಗ್ಗೆ ಹೊಂದಿದ್ದ ಚಿಂತನೆಗಳು ಹಾಗೂ ಈ ಚಿಂತನೆಗಳಿಗೆ ಮೂರ್ತ ಸ್ವರೂಪ ನೀಡಲು ರೂಪಿಸಿದ ಕಾರ್ಯಕ್ರಮಗಳ ಬಗೆಗಿನ ಅಧ್ಯಯನ ಮತ್ತು ಸಂಶೋಧನೆಯನ್ನು ಸೇರಿಸಲು ಕ್ರಮ ವಹಿಸಬೇಕಾಗಿದೆ. ಈ ದಿಸೆಯಲ್ಲಿ ಈಗಾಗಲೇ ಕೇಂದ್ರ ಕಾರ್ಯ ಪ್ರವೃತ್ತವಾಗಿದೆ.

ಈ ಅಧ್ಯಯನ ಕೇಂದ್ರ 2014–15ನೇ ಸಾಲಿನಲ್ಲಿ ಸ್ನಾತಕೋತ್ತರ ಡಿಪ್ಲೊಮಾವನ್ನು ಹೊಸದಾಗಿ ಪ್ರಾರಂಭಿಸಿದೆ. ಹಾಗೆಯೇ ಸ್ನಾತಕೋತ್ತರ ಪದವಿಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ ಸಿಬಿಸಿಎಸ್‌ನ ನಿಯಮದಂತೆ ಮುಕ್ತ ಐಚ್ಛಿಕ(Open Elective)ವಿಷಯದ ಎರಡು ಪ್ರತ್ಯೇಕ ಪತ್ರಿಕೆಗಳನ್ನು ಸಹ ಪರಿಚಹಿಸಲಾಗಿದೆ ಈಗಾಗಲೇ ಈ ಪತ್ರಿಗಳನ್ನು ಇಲ್ಲಿಯವರೆವಿಗೆ ಸುಮಾರು 400ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಅಧ್ಯಯನ ಮಾಡಿರುತ್ತಾರೆ.

## ವಸ್ತು ಸಂಗ್ರಹಾಲಯ:

ಜಗಜೀವನರಾಮ್ ಅವರ ಜೀವನ ಹಾಗೂ ಕಾರ್ಯಸಾಧನೆಗಳನ್ನು ಸಾರ್ವಜನಿಕರು ತಿಳಿದುಕೊಳ್ಳಲು ಸಾಧ್ಯಾವಾಗುವಂತೆ ಮಾಡಲು ವಸ್ತು ಸಂಗ್ರಹಾಲಯವನ್ನು ಕೇಂದ್ರದ ಕಟ್ಟಡದಲ್ಲೆ ಸ್ಥಾಪಿಸಲಾಗಿದೆ. ಸದ್ಯಕ್ಕೆ ಬಾಬೂಜಿಯವರ ಜೀವನದ ವಿವಿಧ ಮಜಲುಗಳನ್ನು ಅರಿಯಲು ಸಹಾಯ ಮಾಡುವಂತಹ ಚಿತ್ರಪಟಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಲಾಗಿದೆ. ಈ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಮೈಸೂರು ಲೋಕಸಭಾ ಸದಸ್ಯರಾಗಿದ್ದ ಶ್ರೀಯುತ ಅಡಗೂರು ಎಚ್ ವಿಶ್ವನಾಥ್ ಅವರು ತಮ್ಮ ಕ್ಷೇತ್ರದ ಅಭಿವೃದ್ಧಿ ನಿಧಿಯಿಂದ ಇಪ್ಪತ್ತೈದು ಲಕ್ಷ ರೂಪಾಯಿಗಳ ಅನುದಾನವನ್ನು ನೀಡಿರುತ್ತಾರೆ. ವಸ್ತು ಸಂಗ್ರಹಾಲಯವನ್ನು ವಿಸ್ತರಿಸುವ ಯೋಜನೆಯನ್ನು ಸಹ ಹೊಂದಲಾಗಿದೆ.

## ಗ್ರಂಥಾಲಯ:

ಪ್ರಾರಂಭದಿಂದಲು ಸುಸಜ್ಜಿತವಾದ ಗ್ರಂಥಾಲಯ ಸ್ಥಾಪನೆ ಕೇಂದ್ರದ ಉದ್ದೇಶವಾಗಿತ್ತು. ಬಾಬೂಜಿಯವರನ್ನು ಕೇಂದ್ರೀಕರಿಸಿ ಬರೆದಿರುವ ಕೃತಿಗಳನ್ನು ಸಮಗ್ರವಾಗಿ ಲಭ್ಯವಿರುವಂತಹ ಗ್ರಂಥಾಲಯ ಸ್ಥಾಪನೆ ಅನಿವಾರ್ಯ. ಈ ದಿಸೆಯಲ್ಲಿ ಈಗಾಗಲೆ, ಕ್ರಮವಹಿಸಿ ಜಗಜೀವನರಾಮ್ ಅವರ ಜೀವನ, ಅವರ ಕಾರ್ಯಸಾಧನೆ, ಅವರ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ಸಾವಿರಾರು ಗ್ರಂಥಗಳನ್ನು ಕೇಂದ್ರದಲ್ಲಿ ಸಂಗ್ರಹಿಸಲಾಗಿದೆ. ಸದ್ಯಕ್ಕೆ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಬಾಷೆಯಲ್ಲಿ ಕೃತಿಗಳು ಗ್ರಂಥಾಲಯದಲ್ಲಿ ಲಭ್ಯವಿದೆ. ಮುಂದಿನ ವರ್ಷಗಳಲ್ಲಿ ಎಲ್ಲಾ ಭಾರತೀಯ ಭಾಷಾ ಗ್ರಂಥಗಳನ್ನು ಈ ಗ್ರಂಥಾಲಯದಲ್ಲಿ ಸೇರಿಸುವ ಯೋಜನೆಯನ್ನು ಅಳವಡಿಸುವ ಬಗೆಗೆ ಯೋಚಿಸಲಾಗಿದೆ. ವಿದ್ಯಾರ್ಥಿಗಳು ಹಾಗೂ ಕೇಂದ್ರದ ಸಿಬ್ಬಂದಿ ವರ್ಗದವರು ಈ ಗ್ರಂಥಾಲಯದಲ್ಲಿ ಲಭ್ಯವಿರುವ ಗ್ರಂಥಗಳ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈಗಾಗಲೇ ಅನೇಕ ಸಂಶೋಧಕರು ಈ ಗ್ರಂಥಾಲಯದ ಸೌಲಭ್ಯವನ್ನು ಉಪಯೋಗಿಸಿ ತಮ್ಮ ಸಂಶೋಧನೆಯನ್ನು ಮುಂದುವರೆಸಿದ್ದಾರೆ.

ಪ್ರಸ್ತುತ 2000ಕ್ಕೂ ಹೆಚ್ಚು ಪುಸ್ತಕಗಳು ನಮ್ಮ ಗ್ರಂಥಾಲಯದಲ್ಲಿ ಲಭ್ಯವಿದೆ. ಹಾಗೆಯೇ ನಮ್ಮ ಕೇಂದ್ರದ ಚಟುವಟಿಕೆಗಳ ಪೋಟೋ ಮತ್ತು ಆಲ್ಬಮ್‌ಗಳು–38 ಸಹ ಕೇಂದ್ರದಲ್ಲಿ ಲಭ್ಯರುತ್ತದೆ.

## ಕೇಂದ್ರದ ಚಟುವಟಿಕೆಗಳು

**2010–11**

**ಒಟ್ಟು ನಡೆದ ಕಾರ್ಯಕ್ರಮಗಳು: 8**

**ದಿನಾಚರಣೆಗಳು–2 ವಿಚಾರ ಸಂಕಿರಣಗಳು–2 ವಿಸ್ತರಣ ಚಟುವಟಿಕೆಗಳು–4**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 18–09–2010 | ವೈಷ್ಣವ ಧರ್ಮ ಸ್ವೀಕರಣೆ: ಪರ ಮತ್ತು ವಿರೋಧ–ಕುರಿತು ಒಂದು ಚರ್ಚೆ ಒಂದು ದಿನದ ವಿಚಾರ ಸಂಕಿರಣ | ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 26–10–2010 | ಒಂದು ದಿನದ ವಿಚಾರ ಸಂಕಿರಣವನ್ನು ಮಾನಸಗಂಗೋತ್ರಿಯಲ್ಲಿ ಆಯೋಜಿಸಲಾಗಿತ್ತು | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 19–11–2010 | ಬಾಬೂಜಿಯವರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ–ತಿ.ನರಸೀಪುರ | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 11–01–2011 | ಬಾಬೂಜಿಯವರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ–ನಂಜನಗೂಡು | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 28–01–2011 | ಬಾಬೂಜಿಯವರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ–ವರುಣ | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 15–02–2011 ರಿಂದ 26–02–2011 | ಸುವರ್ಣ ಮಾನಸ ಶೈಕ್ಷಣಿಕ ವಸ್ತು ಪ್ರದರ್ಶನ, ಮಾನಸಗಂಗೋತ್ರಿ, ಮೈಸೂರು | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 18–02–2011 | ಸಂತ ರವಿದಾಸ ಜಯಂತಿ | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 09–03–2011 | ಗ್ರಾಮಾಂತರ ಜನತೆಗೆ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಪರಿಚಯ–ಇಲವಾಲ | ಇಲವಾಲ ಗ್ರಾಮ ಪಂಚಾಯಿತಿ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |

## 2011–12

**ಒಟ್ಟು ನಡೆದ ಕಾರ್ಯಕ್ರಮಗಳು: 10**

**ದಿನಾಚರಣೆಗಳು–2 ವಿಚಾರ ಸಂಕಿರಣಗಳು–2 ವಿಸ್ತರಣ ಚಟುವಟಿಕೆಗಳು–6**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2011 | ಬಾಬೂ ಜಗಜೀವನರಾಮ್‌ರವರ 104ನೇ ಜನ್ಮ ದಿನಾಚರಣೆ ಹಾಗೂ ಪುಸ್ತಕ ಬಿಡುಗಡೆ ಸಮಾರಂಭ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ |
| 30–05–2011 | ಬಾಬೂ ಜಗಜೀವನರಾಮ್‌ರವರ ಚಿಂತನೆಗಳ ಕುರಿತು ಉಪನ್ಯಾಸ | ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯದ ಅರ್ಥಶಾಸ್ತ್ರ ವಿಭಾಗ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 25–06–2011 | ಬಾಬೂ ಜಗಜೀವನರಾಮ್‌ರವರ ಚಿಂತನೆಗಳ ಕುರಿತು ಉಪನ್ಯಾಸ ಮತ್ತು ಮಹಿಳೆಯರಿಗೆ ಕಾನೂನು ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮ | ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸ ಗಂಗೋತ್ರಿ, ಮೈಸೂರು, ಇನೊವೇಟಿವ್(ರಿ.), ಮೈಸೂರು ಮತ್ತು ಶ್ರೀಕಂಠೇಶ್ವರ ವಿದ್ಯಾಸಂಸ್ಥೆ(ರಿ.), ಕ್ಯಾತಮಾರನಹಳ್ಳಿ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |

| | | | |
|---|---|---|---|
| 06–07–2011 | ಬಾಬೂ ಜಗಜೀವನರಾಮ್‌ರವರ 25ನೆಯ ಪುಣ್ಯತಿಥಿ ಹಾಗು ಗ್ರಾಮೀಣ ಜನತೆಗೆ ಅರಿವು ಮೂಡಿಸುವ ಕಾರ್ಯಕ್ರಮ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಬಾಬೂ ಜಗಜೀವನರಾಮ್ ಯುವಕ ಸಂಘ, ಅಂಕಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 26–08–2011 | ಬಾಬೂ ಜಗಜೀವನರಾಮ್‌ರವರ ಚಿಂತನೆಗಳ ಕುರಿತು ಉಪನ್ಯಾಸ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ | ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸ ಗಂಗೋತ್ರಿ, ಮೈಸೂರು ಎಫ್.ಪಿ.ಎ ಇಂಡಿಯಾ, ಮೈಸೂರು | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 28–09–2011 | ಬಾಬೂ ಜಗಜೀವನರಾಮ್‌ರವರ ಚಿಂತನೆಗಳು ಹಾಗೂ ಕೃಷಿ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ | ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸ ಗಂಗೋತ್ರಿ, ಮೈಸೂರು, ಕರ್ನಾಟಕ ರಾಜ್ಯಕೃಷಿ ಇಲಾಖೆ, ಆತ್ಮ ಯೋಜನೆ, ಕೆ.ಆರ್.ಪೇಟೆ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 26–11–2011 | ಬಾಬೂ ಜಗಜೀವನರಾಮ್ ಚಿಂತನೆಗಳ ಕುರಿತು, ಗ್ರಾಮೀಣ ಜನತೆಗೆ | ಬಾಬೂ ಜಗಜೀವನರಾಮ್ ಅಧ್ಯಯನ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, |

| | | | |
|---|---|---|---|
| | ಆರೋಗ್ಯ ಅರಿವು ಮೂಡಿಸುವ ಉಪನ್ಯಾಸ ಮತ್ತು ಆರೋಗ್ಯ ತಪಾಸಣಾ ಶಿಬಿರ | ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಹಾಗೂ ಎಫ್.ಪಿ.ಎ. ಇಂಡಿಯಾ ಮೈಸೂರು | ಮಾನಸಗಂಗೋತ್ರಿ, ಮೈಸೂರು |
| 16–12–2011 | ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಹಾಗೂ ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 27–01–2012 | ಬಾಬು ಜಗಜೀವನರಾಮ್ ರವರ ಚಿಂತನೆಗಳು ಮತ್ತು ಬುಡಕಟ್ಟು ಸಮುದಾಯದ ಅಭಿವೃದ್ಧಿ ನೆಲೆಗಳು | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಮತ್ತು ಬುಡಕಟ್ಟು ಕೃಷಿಕರ ಸಂಘ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |
| 07–02–2012 | ಸಂತ ಶಿರೋಮಣಿ ರವಿದಾಸ ಜಯಂತಿ ಹಾಗೂ ವಿಚಾರ ಸಂಕಿರಣ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು |

## 2012–13

**ಒಟ್ಟು ನಡೆದ ಕಾರ್ಯಕ್ರಮಗಳು: 11**

**ದಿನಾಚರಣೆಗಳು–7 ವಿಚಾರ ಸಂಕಿರಣಗಳು–1 ವಿಸ್ತರಣ ಚಟುವಟಿಕೆಗಳು–3**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2012 | ಡಾ. ಬಾಬೂ ಜಗಜೀವನರಾಮ್‌ರವರ 105ನೇ ಜನ್ಮ ದಿನಾಚರಣೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ |
| 25–04–2012 | ಡಾ. ಬಾಬೂ ಜಗಜೀವನರಾಮ್‌ರವರ 105ನೇ ಜನ್ಮ ದಿನಾಚರಣೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ, ಚಾಮರಾಜನಗರ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಉಪಗ್ರಹ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಉಪಗ್ರಹ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ |

| | | | |
|---|---|---|---|
| 30–04–2012 | ಡಾ. ಬಾಬೂ ಜಗಜೀವನರಾಮ್‌ರವರ 105ನೇ ಜನ್ಮ ದಿನಾಚರಣೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಸರ್. ಎಂ.ವಿ.ಸ್ನಾತಕೋತ್ತರ ಕೇಂದ್ರ, ಮಂಡ್ಯ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಸರ್. ಎಂ.ವಿ.ಸ್ನಾತಕೋತ್ತರ ಕೇಂದ್ರ, ಮಂಡ್ಯ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ |
| 09–05–2012 | ಡಾ. ಬಾಬೂ ಜಗಜೀವನರಾಮ್‌ರವರ 105ನೇ ಜನ್ಮ ದಿನಾಚರಣೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಹಾಗೂ ಡಾ. ಬಾಬೂ ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನ, ನವದೆಹಲಿ |
| 06–07–2012 | ಡಾ. ಬಾಬೂ ಜಗಜೀವನರಾಮ್ ಅವರ 26ನೇ ಪುಣ್ಯತಿಥಿ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 29–09–2012 | ಡಾ. ಬಾಬೂ ಜಗಜೀವನರಾಮ್‌ರವರ ಚಿಂತನೆಗಳ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ |

| | | | |
|---|---|---|---|
| | ಹಾಗೂ ಮಹಿಳೆಯರಿಗೆ ಸರ್ಕಾರದ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ | ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜು, ಅಣ್ಣೂರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ–ಇವರ ಸಹಯೋಗದಲ್ಲಿ | ಮತ್ತು ವಿಸ್ತರಣ ಕೇಂದ್ರ |
| 14–10–2012 | ಗ್ರಾಮೀಣ ಜನತೆಗೆ ಡಾ. ಬಾಬೂ ಜಗಜೀವನರಾಮ್‌ರವರ ಚಿಂತನೆಗಳು ಹಾಗೂ ಆರೋಗ್ಯ ಅರಿವು ಕುರಿತು ಉಪನ್ಯಾಸ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಎಫ್.ಪಿ.ಎ ಇಂಡಿಯಾ, ಸೇತು ಯೋಜನೆ, ನಂಜನಗೂಡು–ಇವರ ಸಹಯೋಗದಲ್ಲಿ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 09–11–2012 | ಕೇಂದ್ರ ಸರ್ಕಾರದ ಉತ್ಕೃಷ್ಟ ಶಿಕ್ಷಣ ಯೋಜನೆ ಅನುದಾನದಿಂದ ನಿರ್ಮಿಸಲಾದ ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಕಟ್ಟಡದ ಉದ್ಘಾಟನೆ. ಶ್ರೀ ಎ. ನಾರಾಯಣಸ್ವಾಮಿ, ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಹಾಗೂ ಶ್ರೀ ಎಸ್.ಎ.ರಾಮದಾಸ್, ವೈದ್ಯಕೀಯ ಶಿಕ್ಷಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು. ಇವರು ಉಪಸ್ಥಿತರಿದ್ದರು. | ಮೈಸೂರು ವಿಶ್ವವಿದ್ಯಾನಿಲಯ | |

| | | | |
|---|---|---|---|
| 16–12–2012 | 1971ರ ಭಾರತ–ಪಾಕ್ ಯುದ್ಧದ ವಿಜಯದ ರೂವಾರಿ ಡಾ. ಬಾಬೂ ಜಗಜೀವನರಾಮ್ ಸ್ಮರಣಾರ್ಥ 41ನೇ ವರ್ಷದ ವಿಜಯೋತ್ಸವ ದಿನಾಚರಣೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 28–01–2013 | ಗ್ರಾಮೀಣ ಜನತೆಗೆ ಡಾ. ಬಾಬೂ ಜಗಜೀವನರಾಮ್‌ರವರ ಚಿಂತನೆಗಳು ಹಾಗೂ ಸರ್ಕಾರದ ಯೋಜನೆಗಳ ಕುರಿತು ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಗ್ರಾಮ ಪಂಚಾಯಿತಿ, ಮುತ್ತೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕು ಪತ್ರಕರ್ತರ ಸಂಘ(ರಿ.)–ಇವರ ಸಹಯೋಗದಲ್ಲಿ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 16–03–2013 | ಸಂತ ಶಿರೋಮಣಿ ರವಿದಾಸ ಜಯಂತಿ ಹಾಗೂ ರಾಜ್ಯ ಮಟ್ಟದ ವಿಚಾರ ಸಂಕಿರಣ | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ರಾ.ಸೇ.ಯೋ. ಘಟಕ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು–ಇವರ ಸಹಯೋಗದಲ್ಲಿ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2013–14

**ಒಟ್ಟು ನಡೆದ ಕಾರ್ಯಕ್ರಮಗಳು: 9**

**ದಿನಾಚರಣೆಗಳು–4 ವಿಚಾರ ಸಂಕಿರಣಗಳು–1 ವಿಸ್ತರಣ ಚಟುವಟಿಕೆಗಳು–4**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2013 | ಡಾ. ಬಾಬೂ ಜಗಜೀವನರಾಮ್ ಅವರ 106ನೇ ಜನ್ಮ ದಿನಾಚರಣೆ ಹಾಗೂ ಪ್ರೊ. ಮೈಲಹಳ್ಳಿ ರೇವಣ್ಣ ಅವರ ಸಂಪಾದಕತ್ವದಲ್ಲಿ ಕೇಂದ್ರದ ವತಿಯಿಂದ ಹೊರ ತಂದಿರುವ 'ಬಾಬೂಜಿ ಚಿಂತನ–ಮಂಥನ' ಪುಸ್ತಕ ಬಿಡುಗಡೆ ಸಮಾರಂಭ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಸಲಾಯಿತು |
| 14–06–2013 | ಡಾ. ಬಾಬೂ ಜಗಜೀವನರಾಮ್‌ರವರ ಚಿಂತನೆಗಳು: ವಿಶೇಷ ಉಪನ್ಯಾಸ ಹಾಗೂ ಪ್ರಸಿದ್ಧ ಅಂಕಣಕಾರ ಡಾ. ಎಚ್ಚೆಸ್ಕೆ–ಇವರ ಇಂಗ್ಲಿಷ್ ಗ್ರಂಥಭಂಡಾರದ ಹಸ್ತಾಂತರ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–07–2013 | ಡಾ. ಬಾಬೂ ಜಗಜೀವನರಾಮ್ ಅವರ 27ನೇ ವರ್ಷದ ಸಂಸ್ಮರಣಾ ದಿನದ ಅಂಗವಾಗಿ ಅಲೆಮಾರಿ ಸಮುದಾಯಗಳು: ಸವಾಲುಗಳು ಹಾಗೂ ಬಿಡುಗಡೆ ಸಾಧ್ಯತೆಗಳು ರಾಜ್ಯಮಟ್ಟದ ವಿಚಾರ ಸಂಕಿರಣ, ಮುಕ್ತ ಸಂವಾದ ಹಾಗೂ ಕುಪ್ಪೆನಾಗರಾಜ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಅಲೆಮಾರಿ, ಅರೆಅಲೆಮಾರಿ ಹಾಗೂ ವಿಮುಕ್ತ ಬುಡಕಟ್ಟುಗಳ ಒಕ್ಕೂಟ(ರಿ.) | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| | ಅವರ 'ಅಲೆಮಾರಿ ಅಂತರಂಗ' ಪುಸ್ತಕ ಬಿಡುಗಡೆ ಕಾರ್ಯಕ್ರಮ | ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಸಲಾಯಿತು | |
| 29–08–2013 | ಡಾ. ಬಾಬೂ ಜಗಜೀವನರಾಮ್‌ರವರ ಚಿಂತನೆಗಳು: ವಿಶೇಷ ಉಪನ್ಯಾಸ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ, ಕುವೆಂಪುನಗರ, ಮೈಸೂರು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 30–11–2013 | ಡಾ. ಬಾಬೂ ಜಗಜೀವನರಾಮ್‌ರವರ ಚಿಂತನೆಗಳು–ವಿಶೇಷ ಉಪನ್ಯಾಸ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಜೆ.ಎಸ್.ಎಸ್. ಬಾಲಿಕಾ ಪ್ರೌಢಶಾಲೆ, ಸರಸ್ವತಿಪುರಂ, ಮೈಸೂರು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 30–12–2013 | 1971ರ ಭಾರತ–ಪಾಕ್ ಯುದ್ಧದ ವಿಜಯದ ರೂವಾರಿ ಬಾಬೂ ಜಗಜೀವನರಾಮ್ ಸ್ಮರಣಾರ್ಥ 42ನೇ ವರ್ಷದ ವಿಜಯೋತ್ಸವ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸದ ವಿಸ್ತರಣ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜು, ಸರಗೂರು, ಹೆಚ್.ಡಿ.ಕೋಟೆ ತಾಲ್ಲೂಕು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 14–01–2014 ಮತ್ತು 15–01–2014 | ಸಂಕ್ರಾಂತಿ ಸಡಗರದ ಗ್ರಾಮೀಣ ಆಟಗಳ ಸ್ಪರ್ಧೆ ಮತ್ತು ಬಾಬೂಜಿ ಕುರಿತು ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಮನುಕುಲ ಆಶ್ರಮ, ಆರ್.ಎಚ್.ಕಾಲೋನಿ 1, ಬರ್ಮಾ ಕ್ಯಾಂಪ್, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 26–02–2014 | ಸಂತ ರವಿದಾಸ ಜಯಂತಿ ಕಾರ್ಯಕ್ರಮದ ಉದ್ಘಾಟನೆ ಹಾಗೂ ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ, ಕೆ.ಆರ್.ನಗರ ತಾಲ್ಲೂಕು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 26–03–2014 | ದಶಮಾನೋತ್ಸವ ವರ್ಷದ ನಿಮಿತ್ತ ರಾಜ್ಯಮಟ್ಟದ ವಿಚಾರಸಂಕಿರಣ **ಡಾ. ಬಾಬೂ ಜಗಜೀವನರಾಮ್ ಅವರ ಚಿಂತನೆಗಳ ಪ್ರಸ್ತುತತೆ–** ಶೀರ್ಷಿಕೆ ಅಡಿಯಲ್ಲಿ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

# 2014–15

**ಒಟ್ಟು ನಡೆದ ಕಾರ್ಯಕ್ರಮಗಳು: 13**

**ದಿನಾಚರಣೆಗಳು–5 ವಿಚಾರ ಸಂಕಿರಣಗಳು–2 ವಿಸ್ತರಣ ಚಟುವಟಿಕೆಗಳು–6**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2014 | ಡಾ. ಬಾಬೂ ಜಗಜೀವನರಾಮ್ ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 28–05–2014 | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ದಶಮಾನೋತ್ಸವ ವರ್ಷದ ನಿಮಿತ್ತ ವಿಶೇಷ ಉಪನ್ಯಾಸಗಳ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಗಾಂಧಿಭವನ, ಮಾನಸಗಂಗೋತ್ರಿ, ಮೈಸೂರಿನಲ್ಲಿ ಕಾರ್ಯಕ್ರಮ ನಡೆಸಲಾಯಿತು. | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 30–06–2014 | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ದಶಮಾನೋತ್ಸವ ವರ್ಷದ ನಿಮಿತ್ತ ಡಾ. ಬಾಬೂಜಿ ಅವರ ಚಿಂತನೆಗಳು ಮತ್ತು ಮಹಿಳಾ ಸಬಲೀಕರಣ ಕುರಿತು ಉಪನ್ಯಾಸದ ವಿಸ್ತರಣ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿರಿಯಾಪಟ್ಟಣದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 25–07–2014 | ಡಾ. ಬಾಬೂ ಜಗಜೀವನರಾಮ್ ಅವರ 28ನೇ ವರ್ಷದ ಪುಣ್ಯತಿಥಿ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, |

| | | | |
|---|---|---|---|
| | ನಿಮಿತ್ತ ಉಪನ್ಯಾಸ ಕಾರ್ಯಕ್ರಮ | ಮತ್ತು ವಿಸ್ತರಣ ಕೇಂದ್ರ ಹಾಗೂ ಹಾರ್ಡ್ವಿಕ್ ಪದವಿಪೂರ್ವ ಕಾಲೇಜು, ಮೈಸೂರಿನಲ್ಲಿ ಕಾರ್ಯಕ್ರಮ ನಡೆಸಲಾಯಿತು | ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 05–08–2014 | ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ದಶಮಾನೋತ್ಸವ ವರ್ಷದ ನಿಮಿತ್ತ ಡಾ. ಬಾಬೂಜಿ ಅವರ ಚಿಂತನೆಗಳು– ಒಂದು ವಿಚಾರ ಸಂಕಿರಣ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಆದಿಜಾಂಬುವಂತ ಸಂಘ(ರಿ.), ದಾಂಡೇಲಿ, ಹಳಿಯಾಳ ತಾಲ್ಲೂಕು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 27–09–2014 | ಪಿ.ಜಿ.ಡಿಪ್ಲೊಮಾ ಇನ್ ಬಾಬೂ ಜಗಜೀವನರಾಮ್ ಸ್ಟಡೀಸ್ ಕೋರ್ಸ್‌ನ ಉದ್ಘಾಟನಾ ಸಮಾರಂಭ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಜೆ.ಎಸ್.ಎಸ್. ಬಾಲಿಕಾ ಪ್ರೌಢಶಾಲೆ, ಸರಸ್ವತಿಪುರಂ, ಮೈಸೂರು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 27–10–2015 | ಕೇಂದ್ರದ ದಶಮಾನೋತ್ಸವ ಸಂಭ್ರಮ ಡಾ. ಬಾಬೂ ಜಗಜೀವನರಾಮ್ ಅವರ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಕನ್ನಡ ಭಾರತಿ ಪದವಿಪೂರ್ವ ಕಾಲೇಜು, ಕುಶಾಲನಗರ, ಕೊಡಗು ಜಿಲ್ಲೆ ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 07–11–2014 | ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ ದಲಿತ ರಾಜಕರಣ: ಮುಂದಿನ ಸವಾಲು–ಸಾಧ್ಯತೆಗಳು ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಕಲಾ ಕಾಲೇಜು, ಸ್ನಾತಕೋತ್ತರ ವಿಭಾಗಗಳು, ಚಿತ್ರದುರ್ಗ ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು. | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 08–11–2014 | ಡಾ. ಬಾಬೂ ಜಗಜೀವನರಾಮ್ ಕುರಿತು ವಿಶೇಷ ಉಪನ್ಯಾಸ ಕೇಂದ್ರದ ದಶಮಾನೋತ್ಸವ ಸಂಭ್ರಮ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಡಾ. ಬಿ.ಎಂ.ತಿಪ್ಪೇಸ್ವಾಮಿ ಪದವಿಪೂರ್ವ ಕಾಲೇಜು, ವಿದ್ಯಾನಗರ, ದಾವಣಗೆರೆ ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು. | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 16–12–2014 | 1971ರ ಭಾರತ–ಪಾಕ್ ಯುದ್ಧದ ವಿಜಯದ ರೂವಾರಿ ಬಾಬೂ ಜಗಜೀವನರಾಮ್ ಸ್ಮರಣಾರ್ಥ 43ನೇ ವರ್ಷದ ವಿಜಯೋತ್ಸವ ದಿನಾಚರಣೆ ದಶಮಾನೋತ್ಸವ ಸಂಭ್ರಮ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಗಂಗೋತ್ರಿ ಪ್ರೌಢಶಾಲೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 11–02–2015 | ಸಂತ ರವಿದಾಸ ಜಯಂತಿ ಕಾರ್ಯಕ್ರಮದ ಉದ್ಘಾಟನೆ ಹಾಗೂ ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಜೆ.ಎಸ್.ಎಸ್. ಮಹಿಳಾ ಕಾಲೇಜು, | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| | | ಸರಸ್ವತಿಪುರಂ, ಮೈಸೂರು ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು | |
| 28-02-2015 | ಪೌರಕಾರ್ಮಿಕ ಸಮುದಾಯ: ಪ್ರಚಲಿತ ಸಮಸ್ಯೆಗಳು ಹಾಗೂ ವಿಮೋಚನೆಯ ಸಾಧ್ಯತೆಗಳು ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಕರ್ನಾಟಕ ಸರ್ಕಾರ ಇವರ ಇವುಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 08-03-2015 | ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ರಾಷ್ಟ್ರೀಯ ವಿಚಾರ ಸಂಕಿರಣ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ವಿಸ್ಮಯ ಫೌಂಡೇಶನ್(ರಿ.), ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಸಲಾಯಿತು | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2015–16

**ಒಟ್ಟು ನಡೆದ ಕಾರ್ಯಕ್ರಮಗಳು: 14**

**ದಿನಾಚರಣೆಗಳು–5 ವಿಚಾರ ಸಂಕಿರಣಗಳು–5 ವಿಸ್ತರಣ ಚಟುವಟಿಕೆಗಳು–4**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 11–04–2015 | ಡಾ. ಬಾಬೂ ಜಗಜೀವನರಾಮ್ ಅವರ 108ನೇ ಜನ್ಮ ದಿನಾಚರಣೆ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ, ಮೈಸೂರುವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–07–2015 | ಡಾ.ಬಾಬೂ ಜಗಜೀವನರಾಮ್ ಅವರ 29ನೆಯ ವರ್ಷದ ಪುಣ್ಯತಿಥಿ ಹಾಗೂ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸಂಯುಕ್ತ ಶಿಕ್ಷಣ ಸಂಸ್ಥೆ, ನಾವದಗೇರಿ, ಬೀದರ್ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 07–07–2015 | ಕನ್ನಡ–ತೆಲುಗು ದಲಿತ ಸಾಹಿತ್ಯ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾನಿಲಯ, ಹೈದರಾಬಾದ್ ಮತ್ತು ದಲಿತ ಅಧ್ಯಯನ ಕೇಂದ್ರ, ಹೈದರಾಬಾದ್ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 18-08-2015 | ದಲಿತ ಬದುಕಿನ ಸಾಂಸ್ಕೃತಿಕ ಸವಾಲುಗಳು ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ತುಮಕೂರು ವಿಶ್ವವಿದ್ಯಾಲಯ, ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 24-08-2015 | ಜಾತ್ಯಾತೀತ ಚಿಂತನೆಗಳನ್ನು ಒಳಗೊಂಡ ದಲಿತ ಹಾಗೂ ದಲಿತೇತರ ಶರಣರ ವಚನ ಗಾಯನ ಮತ್ತು ಸಂವಾದ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಹಾಗೂ ಹಂಸಜ್ಯೋತಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 22-09-2015 | ಡಾ. ಬಾಬೂಜಿ ಅವರ ಚಿಂತನೆಗಳ ಕುರಿತು ಉಪನ್ಯಾಸ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಗೌತಮ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ ಟೌನ್, ಚಾಮರಾಜನಗರ ಜಿಲ್ಲೆ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 21-11-2015 ಮತ್ತು 22-11-2015 | ದಲಿತ ಸಂವೇದನೆಯ ಸಾಂಸ್ಕೃತಿಕ ಆಯಾಮಗಳು ಸಾಹಿತಿಗಳು, ಚಿಂತಕರು, ಹೋರಾಟಗಾರರು, ಕಲಾವಿದರ ಎರಡು ದಿನಗಳ ರಾಷ್ಟ್ರೀಯ ಚಿಂತನಾ ಸಮಾವೇಶ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 19–12–2015 | 1971ರ ಭಾರತ–ಪಾಕ್ ಯುದ್ಧದ ವಿಜಯದ ರೂವಾರಿ ಡಾ. ಬಾಬೂ ಜಗಜೀವನರಾಮ್ ಸ್ಮರಣಾರ್ಥ 44ನೆಯ ವರ್ಷದ ವಿಜಯ ದಿವಸ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 07–01–2016 | ಕವಿ ಹಾಗೂ ಕಲಾವಿದ ಖಲೀಲ್ ಗಿಬ್ರಾನ್ ಅವರ ಹುಟ್ಟುಹಬ್ಬದ ನೆನಪಿನಲ್ಲಿ ಖಲೀಲ್ ಗಿಬ್ರಾನ್ ಅವರ ಪ್ರವಾದಿ ಕೃತಿ ಕುರಿತು ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಬಳಗ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 28–01–2016 | ಬಾಬೂ ಜಗಜೀವನರಾಮ್ ಕುರಿತು ವಿಶೇಷ ಉಪನ್ಯಾಸ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಣಾವರ, ಅರಸೀಕೆರೆ ತಾಲ್ಲೂಕು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 27–02–2016 | ಸಂತ ರವಿದಾಸ ಜಯಂತಿ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 13–03–2016 | ಡಾ. ಬಾಬೂ ಜಗಜೀವನರಾಮ್ ಅವರ ಕುರಿತು ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸಮೃದ್ಧಿ ಕರ್ನಾಟಕ ಅಭಿವೃದ್ಧಿ ಸಂಘ(ರಿ.), ಕಾರವಾರ, ಉತ್ತರ ಕನ್ನಡ ಜಿಲ್ಲೆ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 14–03–2016 | ಡಾ.ಬಾಬೂ ಜಗಜೀವನರಾಮ್ ಅವರ ಕುರಿತು ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಕಿ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 15–03–2016 | ಡಾ. ಬಾಬೂಜಗಜೀವನರಾಮ್ ಅವರ ಕುರಿತು ವಿಶೇಷ ಉಪನ್ಯಾಸ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಕನ್ನಡ ಸ್ನಾತಕೋತ್ತರ ಅಧ್ಯಯನ, ಸಂಶೋಧನ ವಿಭಾಗ, ಸರ್ಕಾರಿ ಕಾಲೇಜು, ಕಾಸರಗೋಡು, ಕೇರಳ ರಾಜ್ಯ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2016–17

**ಒಟ್ಟು ನಡೆದ ಕಾರ್ಯಕ್ರಮಗಳು: 5**

**ದಿನಾಚರಣೆಗಳು–3 ವಿಚಾರ ಸಂಕಿರಣಗಳು–1 ವಿಸ್ತರಣ ಚಟುವಟಿಕೆಗಳು–1**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2016 | ಡಾ.ಬಾಬೂ ಜಗಜೀವನರಾಮ್ ಅವರ 109ನೇ ಜನ್ಮ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 30–05–2016 | ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವ ವರ್ಷ ಆಚರಣೆ ಪ್ರಯುಕ್ತ ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದಿಂದ ಹೊರತಂದಿರುವ *'ಐದು ಕೃತಿಗಳ ಬಿಡುಗಡೆ'* ಕಾರ್ಯಕ್ರಮ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವ ವರ್ಷ ಆಚರಣೆ ಸಮಿತಿ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–07–2016 | ಡಾ.ಬಾಬೂ ಜಗಜೀವನರಾಮ್ ಅವರ 30ನೆಯ ವರ್ಷದ ಪುಣ್ಯತಿಥಿ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 24–12–2016 | ಮಂಜು ಕೋಡಿಉಗನೆ ಅವರ ಕಥಾ ಸಂಕಲನ "ಬೆಟ್ಟಬೇಗೆ" ಲೋಕಾರ್ಪಣೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ ಹಾಗೂ ಜೋಳಿಗೆ ಪ್ರಕಾಶನ, ಚಾಮರಾಜನಗರ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 25–03–2017 ಮತ್ತು 26–03–2017 | ಬಾಬೂ ಜಗಜೀವನರಾಮ್ ಚಿಂತನೆಗಳ ಪ್ರವೇಶಿಕೆ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2017–18

**ಒಟ್ಟು ನಡೆದ ಕಾರ್ಯಕ್ರಮಗಳು: 9**

**ದಿನಾಚರಣೆಗಳು–2 ವಿಚಾರ ಸಂಕಿರಣಗಳು–4 ವಿಸ್ತರಣ ಚಟುವಟಿಕೆಗಳು–3**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2017 | ಡಾ. ಬಾಬೂ ಜಗಜೀವನರಾಮ್ ಅವರ 110ನೇ ವರ್ಷದ ಜನ್ಮ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ, ಮೈಸೂರುವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 01–05–2017 | ಜೆ.ಸಿ. ಕುಮಾರಪ್ಪ ಅಂಡ್ ಗಾಂಧಿಸ್ ಸ್ಟ್ರಗಲ್ ಫಾರ್ ಎಕನಾಮಿಕ್ ಜಸ್ಟೀಸ್ ಎಂಬ ವಿಷಯ ಕುರಿತ ವಿಶೇಷ ಉಪನ್ಯಾಸ | ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ (ರಿ), | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 16–05–2017 | ಆಧುನಿಕ ಭಾರತದ ಚರಿತ್ರೆ–ಬಾಬೂ ಜಗಜೀವನರಾಮ್ ಹಾಗೂ ಅವರ ವಿಚಾರಧಾರೆಗಳ ಪ್ರಭಾವ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 20–05–2017 | ಬಾಬೂ ಜಗಜೀವನರಾಮ್ ಅವರ 110ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ಬಾಬೂಜಿ ಅವರ ಅಲೋಚನೆಗಳು, ಕ್ರಿಯೆಗಳು ಮತ್ತು ಅವುಗಳ ಪ್ರಸ್ತುತತೆ ಬಗ್ಗೆ ಹೊಸ ಅಲೋಚನೆಗಳ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಇವರ ಸಹಯೋಗದಲ್ಲಿ ಕಾರ್ಯಕ್ರಮವನ್ನು ಕೇಂದ್ರದ ಸಭಾಂಗಣದಲ್ಲಿ ನಡೆಸಲಾಯಿತು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 03–06–2017 | ದಿವಂಗತ ಪ್ರೊ. ಟಿ. ಯಲ್ಲಪ್ಪ ಬೂತಯ್ಯಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ | – | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 22–12–2017 | ಡಾ.ಬಾಬೂ ಜಗಜೀವನರಾಮ್ ಅವರನ್ನು ಕುರಿತ ಒಂದು ದಿನದ ಜಿಲ್ಲಾ ಮಟ್ಟದ ಕಾರ್ಯಾಗಾರ | ದಲಿತ ಹಕ್ಕುಗಳ ಸಮಿತಿ ಮತ್ತು ಬಾಬೂ ಜಗಜೀವನರಾಮ್ ಸಂಘಗಳ ಒಕ್ಕೂಟ ಮಂಡ್ಯ ಜಿಲ್ಲೆ | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 21–01–2018 | ಹೊಸ ವರ್ಷ 2018 ಹೊಸ ಹೆಜ್ಜೆ<br><br>ವಿದ್ಯಾರ್ಥಿ ಕವಿಗೋಷ್ಠಿ–ದೃಷ್ಠಿ ವಿಶೇಷ ಚೇತನರ ಕವಿಗೋಷ್ಠಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸಗಳು–ಯುವ ಕವಿಗೋಷ್ಠಿ<br>ಸಮರ್ಥ ಕನ್ನಡಿಗರಿಗೆ ಗೌರವಾರ್ಪಣೆ–ಪುಸ್ತಕ ಲೋಕಾರ್ಪಣೆ | ಸಮರ್ಥ ಕನ್ನಡಿಗರು (ನೋಂ), ಮೈಸೂರು ಜಿಲ್ಲೆ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 17–02–2018 | ಆಧುನಿಕ ಕರ್ನಾಟಕದ ರೂಪಿಕೆಯಲ್ಲಿ ಹೆಚ್.ಸಿ. ದಾಸಪ್ಪ ಮತ್ತು ಯಶೋಧರಾದಾಸಪ್ಪರವರ ಪಾತ್ರ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2018–19

**ಒಟ್ಟು ನಡೆದ ಕಾರ್ಯಕ್ರಮಗಳು: 4**

**ದಿನಾಚರಣೆಗಳು–1 ವಿಚಾರ ಸಂಕಿರಣಗಳು–2 ವಿಸ್ತರಣ ಚಟುವಟಿಕೆಗಳು–1**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 10–04–2018 | ಡಾ. ಬಾಬೂ ಜಗಜೀವನರಾಮ್ ಅವರ 111ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ "ಜಗಜೀವನರಾಮ್‌ರವರ ಚಿಂತನೆಗಳ ಪ್ರಸ್ತುತತೆ" ಎಂಬ ವಿಚಾರ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ, ಮೈಸೂರುವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–07–2018 | ಡಾ.ಬಾಬೂ ಜಗಜೀವನರಾಮ್ ಅವರ 32ನೆಯ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 20–07–2018 | ಆಧುನಿಕ ಭಾರತದ ಚರಿತ್ರೆ ಬಾಬೂ ಜಗಜೀವನರಾಮ್ ಹಾಗೂ ಅವರ ವಿಚಾರಧಾರೆಗಳ ಪ್ರಭಾವ ಕುರಿತು ಒಂದು ದಿನದ ಕಾರ್ಯಾಗಾರ | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 24–07–2018 | ಆಧುನಿಕ ಭಾರತದ ನಿರ್ಮಾಣ ಹಾಗೂ ದಲಿತ ನಾಯಕತ್ವ **ಡಾ. ಬಾಬೂ ಜಗಜೀವನರಾಮ್ ಜೀವನ–ಚಿಂತನೆ** ಮತ್ತು ಸಾಧನೆಗಳ ಕುರಿತು ಒಂದು ದಿನದ ವಿಚಾರ ಸಂಕಿರಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿ. ನರಸೀಪುರ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2019–20

**ಒಟ್ಟು ನಡೆದ ಕಾರ್ಯಕ್ರಮಗಳು: 4**

**ದಿನಾಚರಣೆಗಳು–1 ವಿಚಾರ ಸಂಕಿರಣಗಳು–1 ವಿಸ್ತರಣ ಚಟುವಟಿಕೆಗಳು–2**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 13–04–2019 | ಡಾ. ಬಾಬೂ ಜಗಜೀವನರಾಮ್ ಅವರ 112ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ "ಡಾ. ಜಗಜೀವನರಾಮ್ ಸಾಧನೆಗಳ ಪ್ರಸ್ತುತತೆ" ಎಂಬ ವಿಷಯ ಕುರಿತು ವಿಚಾರ ಸಂಕಿರಣ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ, ಮೈಸೂರುವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 20–11–2019 | ಡಾ. ಬಾಬೂ ಜಗಜೀವನರಾಮ್‌ರತ್ತ: ಯುವಜನತೆಯ ಚಿತ್ತ ಒಂದು ದಿನದ ವಿಚಾರ ಸಂಕಿರಣ | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 22–11–2019 | ಬಾಬೂ ಜಗಜೀವನರಾಮ್ ಚಿಂತನೆಗಳು: ಸಮಕಾಲೀನ ಯುವ ಜನತೆಯೊಂದಿಗೆ ಮುಖಾಮುಖಿ ಒಂದು ದಿನದ ವಿಚಾರ ಸಂಕಿರಣ | ಸರ್, ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ ಕೈಗಾರಿಕಾ ಪ್ರದೇಶ, ಮಂಡ್ಯ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 23–11–2019 | ಆಧುನಿಕ ಭಾರತದ ರಾಜಕಾರಣಕ್ಕೆ ಬಾಬೂ ಜಗಜೀವನರಾಮ್‌ರವರ ಕೊಡುಗೆಗಳು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2020–21

**ಒಟ್ಟು ನಡೆದ ಕಾರ್ಯಕ್ರಮಗಳು: 10**

**ದಿನಾಚರಣೆಗಳು–3 ವಿಚಾರ ಸಂಕಿರಣಗಳು–2 ವಿಸ್ತರಣ ಚಟುವಟಿಕೆಗಳು–(ವೆಬಿನಾರ್)5**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 17–10–2020 | "ಒಳಮೀಸಲಾತಿ ಕುರಿತು: ಬಕಾಲಮುನಿ ಕೆ.ಬಿ.ಎಸ್ ಕೊನೆಯ ನುಡಿ ಕಿರುಹೊತ್ತಿಗೆ ಬಿಡುಗಡೆ" | ಮಾತಂಗ ಸಾಹಿತ್ಯ ಪರಿಷತ್(ರಿ.), ಕರ್ನಾಟಕ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 16–12–2020 | 1971ರ ಭಾರತ–ಪಾಕ್ ಯುದ್ಧದ ವಿಜಯದ ರೂವಾರಿ ಡಾ. ಬಾಬೂ ಜಗಜೀವನರಾಮ್ ಸ್ಮರಣಾರ್ಥ 49ನೆಯ ವರ್ಷದ "ವಿಜಯ ದಿವಸ" ಆಚರಣೆ ಪ್ರಯುಕ್ತ ವೆಬಿನಾರ್ ಉಪನ್ಯಾಸ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 28–12–2020 | "ಬಾಂಗ್ಲಾದೇಶದ ಉದಯದಲ್ಲಿ ಬಾಬೂ ಜಗಜೀವನರಾಮ್‌ರವರ ಪಾತ್ರ" ಕುರಿತು ವೆಬಿನಾರ್ | ಜೆ.ಎಸ್.ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 04–01–2021 | ಬಾಬೂ ಜಗಜೀವನರಾಮ್ ವಿಚಾರಧಾರೆ ಕುರಿತ ವೆಬಿನಾರ್ ಸರಣಿಗಳು<br>ಸರಣಿ–1 ವಿಷಯ: "ಬಾಬೂ ಜಗಜೀವನರಾಮ್ ಮತ್ತು ರಾಷ್ಟ್ರೀಯವಾದ" | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 11–01–2021 | ಡಾ. ಬಾಬೂ ಜಗಜೀವನರಾಮ್ ವಿಚಾರಧಾರೆ ಕುರಿತ ವೆಬಿನಾರ್ ಸರಣಿಗಳು ಸರಣಿ–2 ವಿಷಯ: "ಬಾಬೂ ಜಗಜೀವನರಾಮ್ ಮತ್ತು ಗಾಂಧಿವಾದ" | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 18–01–2021 | ಡಾ. ಬಾಬೂ ಜಗಜೀವನರಾಮ್ ವಿಚಾರಧಾರೆ ಕುರಿತ ವೆಬಿನಾರ್ ಸರಣಿಗಳು ಸರಣಿ–3 ವಿಷಯ: "ಬಾಬೂ ಜಗಜೀವನರಾಮ್ ಮತ್ತು ಸಮಾಜವಾದ" | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 25–01–2021 | ಡಾ. ಬಾಬೂ ಜಗಜೀವನರಾಮ್ ವಿಚಾರಧಾರೆ ಕುರಿತ ವೆಬಿನಾರ್ ಸರಣಿಗಳು ಸರಣಿ–4 ವಿಷಯ: "ಬಾಬೂ ಜಗಜೀವನರಾಮ್ ಮತ್ತು ಜಾತ್ಯಾತೀತವಾದ" | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 29–01–2021 | ಡಾ. ಬಾಬೂ ಜಗಜೀವನರಾಮ್ ವಿಚಾರಧಾರೆ ಕುರಿತ ವೆಬೆನಾರ್ ಸರಣಿಗಳು ಸರಣಿ–5 ವಿಷಯ: "ಬಾಬೂ ಜಗಜೀವನರಾಮ್ ಮತ್ತು ದಲಿತವಾದ" | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 27–02–2021 | ಸಂತ ಶಿರೋಮಣಿ ರವಿದಾಸ ಜಯಂತಿ ಪ್ರಯುಕ್ತ "ಸಂತ ರವಿದಾಸ್ ಗತ ಹಾಗೂ ವರ್ತಮಾನದೊಂದಿಗಿನ ಅನುಸಂಧಾನ" ಕುರಿತ ವೆಬಿನಾರ್ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 03–03–2021 | ಆ. ಸುಂದರ್‌ರಾಜ್‌ರವರ "ಬಳ್ಳಿಯೊಡಲ ಹೂಗಳು" ಕವನ ಸಂಕಲನ ಕೃತಿ ಬಿಡುಗಡೆ ಸಮಾರಂಭ | ಸುಂದರ್‌ರಾಜ್ ಸ್ನೇಹ ಕಲಾನಿಕೇತನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2021–22

**ಒಟ್ಟು ನಡೆದ ಕಾರ್ಯಕ್ರಮಗಳು: 2**

**ದಿನಾಚರಣೆಗಳು–1 ವಿಚಾರ ಸಂಕಿರಣಗಳು–1 ವಿಸ್ತರಣ ಚಟುವಟಿಕೆಗಳು–**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2021<br>06–04–2021 | ಡಾ. ಬಾಬೂ ಜಗಜೀವನರಾಮ್ ಅವರ 114ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ "ಸಂಶೋಧನಾ ನೆಲೆಯಲ್ಲಿ ಬಾಬೂ ಜಗಜೀವನರಾಮ್" ಹಾಗೂ "ಭಾಷೆ ಮತ್ತು ಸಮಾಜ ವಿಜ್ಞಾನಗಳ ಸಂಶೋಧನೆ" ಎಂಬ ವಿಷಯಗಳ ಕುರಿತ ಎರಡು ದಿನಗಳ ಕಾರ್ಯಾಗಾರ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 04–09–2021 | "ಯಶಸ್ಸಿನ ಪ್ರತೀಕ ಬಾಬೂ ಜಗಜೀವನರಾಮ್" ಎಂಬ ವಿಷಯ ಕುರಿತು ಒಂದು ದಿನದ ವಿಚಾರ ಸಂಕಿರಣ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2022–23

**ಒಟ್ಟು ನಡೆದ ಕಾರ್ಯಕ್ರಮಗಳು: 3**

**ದಿನಾಚರಣೆಗಳು–3 ವಿಚಾರ ಸಂಕಿರಣಗಳು– ವಿಸ್ತರಣ ಚಟುವಟಿಕೆಗಳು–**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2021 | ಡಾ. ಬಾಬೂ ಜಗಜೀವನರಾಮ್ ಅವರ 115ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ "ಪುಟವಿಟ್ಟ ಚಿನ್ನ ಬಾಬೂ ಜಗಜೀವನರಾಮ್: ಜೀವನ–ವ್ಯಕ್ತಿತ್ವ–ಸಾಧನೆಗಳ ಯಶೋಗಾಥೆ" ಎಂಬ ವಿಷಯ ಕುರಿತ ಒಂದು ದಿನದ ಕಾರ್ಯಾಗಾರ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 22–04–2022 | ಬಾಬೂ ಜಗಜೀವನರಾಮ್ ಅವರ 115ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ವಿಶೇಷವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ **"ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ ಮತ್ತು ರಸಪ್ರಶ್ನೆ(ಕ್ವಿಜ್)"** ಕಾರ್ಯಕ್ರಮವನ್ನು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 15–08–2022 | 75ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ ಮತ್ತು ಬಾಬೂಜಿ ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ ಮತ್ತು ರಸಪ್ರಶ್ನೆ(ಕ್ವಿಜ್)ಯಲ್ಲಿ ವಿಜೇತರಾದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಸಮಾರಂಭ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2023–24

**ಒಟ್ಟು ನಡೆದ ಕಾರ್ಯಕ್ರಮಗಳು: 6**

**ದಿನಾಚರಣೆಗಳು–4 ವಿಚಾರ ಸಂಕಿರಣಗಳು–1 ವಿಸ್ತರಣ ಚಟುವಟಿಕೆಗಳು–1**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2023 | ಡಾ. ಬಾಬೂ ಜಗಜೀವನರಾಮ್ ಅವರ 116ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ "ಬಡತನ ನಿರ್ಮೂಲನೆಗೆ ಬಾಬೂ ಜಗಜೀವನರಾಮ್ ಅವರ ಕೊಡುಗೆ" | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–07–2023 | ಡಾ. ಬಾಬೂ ಜಗಜೀವನರಾಮ್ ಅವರ 37ನೇ ವರ್ಷದ ಪುಣ್ಯ ಸ್ಮರಣೆ ಪ್ರಯುಕ್ತ ವಿಶೇಷ ಉಪನ್ಯಾಸ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 09–09–2023 | "ದಲಿತ ಅರಸರ ಸಾಂಸ್ಕೃತಿಕ ನೋಟ ಹಾಗೂ ಅರಸು ಕುರನ್ಗರಾಯನ ಸಂಸ್ಕೃತಿ ಮತ್ತು ಚಾರಿತ್ರಿಕ ನೆಲೆಗಳು" ಎಂಬ ವಿಷಯ ಕುರಿತು ಒಂದು ದಿನದ ವಿಚಾರ ಸಂಕಿರಣ. | ಮಾತಂಗ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 09–12–2023 | ಕೇಂದ್ರದ ವತಿಯಿಂದ ಕವಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಶ್ರೀ ಸುಬ್ರಮಣ್ಯ ಭಾರತಿ ಅವರ ಜನ್ಮ ದಿನೋತ್ಸವವನ್ನು ಪ್ರಯುಕ್ತ ದಿನಾಂಕ: 09–12–2023ರಂದು ವಿಶೇಷವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಮತ್ತು ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

| | | | |
|---|---|---|---|
| 16–12–2023 | 1971ರ ಭಾರತ–ಪಾಕ್ ಯುದ್ಧದ ವಿಜಯ ರೂವಾರಿ ಡಾ. ಬಾಬೂ ಜಗಜೀವನರಾಮ್ ಸ್ಮರಣಾರ್ಥ 52ನೇ ವರ್ಷದ ವಿಜಯ ದಿವಸ ಹಾಗೂ ವಿಶೇಷ ಉಪನ್ಯಾಸ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–03–2024 | ದಲಿತ ಐಕ್ಯತೆ ಸವಾಲುಗಳು ಹಾಗೂ ಸಾಧ್ಯತೆಗಳು ಕುರಿತು ಒಂದು ದಿನದ ಕಾರ್ಯಾಗಾರ | ಕರ್ನಾಟಕ ದಲಿತರ ವೆಲ್‌ಫೇರ್ ಟ್ರಸ್ಟ್ (ರಿ.), ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2024–25

**ಒಟ್ಟು ನಡೆದ ಕಾರ್ಯಕ್ರಮಗಳು: 3**

**ದಿನಾಚರಣೆಗಳು–2 ವಿಚಾರ ಸಂಕಿರಣಗಳು– ವಿಸ್ತರಣ ಚಟುವಟಿಕೆಗಳು–1**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2024 | ಡಾ. ಬಾಬೂ ಜಗಜೀವನರಾಮ್ ಅವರ 117ನೇ ವರ್ಷದ ಜನ್ಮದಿನಾಚರಣೆ ಹಾಗೂ ವಿಶೇಷ ಉಪನ್ಯಾಸ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 06–07–2024 | ಡಾ. ಬಾಬೂ ಜಗಜೀವನರಾಮ್ ಅವರ 38ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 16–12–2024 | 1971ರ ಭಾರತ–ಪಾಕ್ ಯುದ್ಧದ ವಿಜಯ ರೂವಾರಿ ಡಾ. ಬಾಬೂ ಜಗಜೀವನರಾಮ್ ಸ್ಮರಣಾರ್ಥ 53ನೇ ವರ್ಷದ ವಿಜಯ ದಿವಸ್ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

## 2025–26

**ಒಟ್ಟು ನಡೆದ ಕಾರ್ಯಕ್ರಮಗಳು: 2**

**ದಿನಾಚರಣೆಗಳು–2 ವಿಚಾರ ಸಂಕಿರಣಗಳು– ವಿಸ್ತರಣ ಚಟುವಟಿಕೆಗಳು–**

| ದಿನಾಂಕ | ಕಾರ್ಯಕ್ರಮ | ಸಹಯೋಗ | ಪ್ರಾಯೋಜನೆ |
|---|---|---|---|
| 05–04–2025 | ಡಾ. ಬಾಬೂ ಜಗಜೀವನರಾಮ್ ಅವರ 118ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |
| 08–08–2025 | ವಿವೇಕಯುತ ಸಂಸದೀಯಪಟು ಶ್ರೀ ವೈ. ರಾಮಕೃಷ್ಣ ಅವರ ಸಾಧನೆಗಳು (ಬದುಕು, ಸಂಘಟನೆ ಮತ್ತು ರಾಜಕಾರಣ) ಎಂಬ ವಿಷಯ ಕುರಿತು ಒಂದು ದಿನದ ವಿಚಾರ ಸಂಕಿರಣ | – | ಡಾ.ಬಾಬೂ ಜಗಜೀವನರಾಮ್ ಅಧ್ಯಯನ,ಸಂಶೋಧನ ಮತ್ತು ವಿಸ್ತರಣ ಕೇಂದ್ರ |

**ಕೇಂದ್ರದ ವತಿಯಿಂದ ಇಲ್ಲಿಯವರೆವಿಗೆ ಪ್ರಕಟಣೆಯಾಗಿರುವ ಕೃತಿಗಳ ವಿವರ ಕೆಳಕಂಡಂತಿದೆ**

| ಕ್ರ.ಸಂ | ಪುಸ್ತಕದ ಹೆಸರು | ಸಂಪಾದಕರ ಹೆಸರು |
|---|---|---|
| 1. | ಭಾರತದಲ್ಲಿ ಜಾತಿ ಪದ್ಧತಿಯ ಸವಾಲುಗಳು | ಪ್ರೊ. ಟಿ.ವೈ.ಬೂತಯ್ಯ<br>ಪ್ರೊ. ಗೌರಮ್ಮ |
| 2. | ದಲಿತ ಸಂತರು | ಪ್ರೊ. ಮೈಲಹಳ್ಳಿ ರೇವಣ್ಣ |
| 3. | ಬಾಬೂಜಿ ಚಿಂತನ–ಮಂಥನ | ಪ್ರೊ. ಮೈಲಹಳ್ಳಿ ರೇವಣ್ಣ |
| 4. | ನೆನಪು ಸಂಜೀವಿನಿ ಸಂಪುಟ–1 | ಪ್ರೊ. ಮೈಲಹಳ್ಳಿ ರೇವಣ್ಣ |
| 5. | ನೆನಪು ಸಂಜೀವಿನಿ ಸಂಪುಟ–2 | ಪ್ರೊ. ಮೈಲಹಳ್ಳಿ ರೇವಣ್ಣ |
| 6. | ನೆನಪು ಸಂಜೀವಿನಿ ಸಂಪುಟ–3 | ಪ್ರೊ. ಮೈಲಹಳ್ಳಿ ರೇವಣ್ಣ |
| 7. | ಬಾಬೂ ಜಗಜೀವನರಾಮ್ ಹೋರಾಟದ ಬದುಕು | ಪ್ರೊ. ಮೈಲಹಳ್ಳಿ ರೇವಣ್ಣ |
| 8. | ಧೀಮಂತ ರಾಷ್ಟ್ರನಾಯಕ ಬಾಬೂ ಜಗಜೀವನರಾಮ್ | ಪ್ರೊ. ಮೈಲಹಳ್ಳಿ ರೇವಣ್ಣ |

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪ್ರೊ. ಕೆ. ಸದಾಶಿವ)